## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 243/2014 ಸಿ.ಡಬ್ಲ್ಯೂ –05 ಪಿ.ಡಬ್ಲ್ಯೂ -05

| | | |
|---|---|---|
| ಹೆಸರು | ಃ | ಪಿಂಟ್ಯಾ |
| ತಂದೆಃ ಗಂಡ | ಃ | ಮಲ್ಕಪ್ಪಾ ಗುಂಡಗುರ್ತಿ |
| ವಯಸ್ಸು | ಃ | ೩೮ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಕುಡಕಿ |

ದಿನಾಂಕಃ೧೮.೦೩.೨೦೨೫

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-೧ ನನ್ನ ಚಿಕ್ಕಪ್ಪ, ಚಾಸಾ-೪, ೬ ನನ್ನ ಚಿಕ್ಕಪ್ಪನ ಮಕ್ಕಳು, ಚಾಸಾ-೨, ೩, ೭ ರಿಂದ ೧೦ ರವರ ಪರಿಚಯ ಇರುತ್ತದೆ.

ದಿ.18.10.2013 ರಂದು ಆರೊಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬಯ್ಯುವುದು ಮಾಡುತ್ತಿದ್ದರು. ಬೀರ ದೇವರ ಗುಡಿಯ ಸಲುವಾಗಿ 4 ಎಕರೆ ಜಮೀನು ಇರುತ್ತದೆ, ಆರೋಪಿತರು ಮತ್ತು ನಮಗೆ ಅರ್ಧ ಅರ್ಧ ಜಮೀನು ಇರುತ್ತದೆ. ನಮಗೆ ಪಾಳಿ ಎರಡು ಸಲ ಬರುತ್ತದೆ. ಆದಕಾರಣದಿಂದ ಆರೋಪಿತರು ನಮ್ಮ ಜೊತೆ ಜಗಳ ಮಾಡಿರುತ್ತಾರೆ. ಆರೋಪಿ ನಂ.೨ ರಿಂಗ್ ಪಾನಾದಿಂದ ನನ್ನ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆ, ನಂತರ ಆಸ್ಪತ್ರೆಗೆ ತೋರಿಸಿರುತ್ತೇನೆ. ಅವರವರು ಜಗಳ ಮಾಡುತ್ತಿದ್ದರು, ನನಗೆ ಮೂರ್ಚೆ ಹೋಗಿರುತ್ತದೆ. ಮು.ಮಾ- ೧ ಮತ್ತು ೨ನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಆರೋಪಿ ನಂ.೧ ಚಾಸಾ-೧ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಮುಖಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ. ಚಾಸಾ-೬ ರವರು ಜಗಳ ಬಿಡಿಸಲು ಹೋದಾಗ ಆರೋಪಿ ನಂ.೨ ಅವರನ್ನು ಎಳೆದಾಡಿ ಹೊಡೆದಿರುತ್ತಾನೆ ಎಂದರೆ ಸರಿ. ಆರೋಪಿ ನಂ.೧ ಚಾಸಾ-೧ ರವರಿಗೆ ಕಟ್ಟಿಗೆಯಿಂದ ತಲೆಗೆ ಹೊಡೆದಿರುತ್ತಾನೆ ಎಂದರೆ ಸರಿ. ಆರೋಪಿ ನಂ.೨ ರವರು ನನಗೆ ಪಾನಾದಿಂದ ಎಡಭುಜದ ಮೇಲೂ ಸಹ ಹೊಡೆದಿರುತ್ತಾರೆ ಎಂದರೆ ಸರಿ. ಆರೊಪಿ ನಂ.೩ ಇವರನ್ನು ಬಿಡಬೇಡಿರಿ ಖಲಾಸ ಮಾಡಿ ಎಂದು ಹೇಳಿರುತ್ತಾರೆ ಎಂದರೆ ಸರಿ. ಆರೋಪಿ ನಂ.೨ ಚಾಸಾ-೪ ರವರಿಗೆ ರಿಂಗ್ ಪಾನಾದಿಂದ ತಲೆಗೆ ಹೊಡೆದಿರುತ್ತಾನೆ ಎಂಧರೆ ಸರಿ. ಸದರಿ ಜಗಳವನ್ನು ಚಾಸಾ-೭

ರಿಂದ ೧೦ ರವರು ನೋಡಿ ಬಿಡಿಸಿರುತ್ತಾರೆ ಎಂಧರೆ ಸರಿ. ಈ ರೀತಿಯಾಗಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ.ವಿ.ಇ. ವಕೀಲರಿಂದ</u>**

ದಿ. ೧೮.೧೦.೨೦೧೩ ರಂದು ಆರೋಪಿತರು ನಮ್ಮ ಮೇಲೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಅದರಲ್ಲಿ ನಾವು ಒಟ್ಟು ಏಳು ಜನ ಇರುತ್ತೇವೆ ಎಂದರೆ ಸರಿ. ಆರೋಪಿ ನಂ.೧ ಒಂದು ಪ್ರಕರಣವನ್ನು ನಮ್ಮ ಮೇಲೆ ಮಾಡಿರುತ್ತಾನೆ, ನಾವು ಅವನ ಮೇಲೆ ಒಂದು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿ. ಘಟನಾ ಸಮಯದಲ್ಲಿ ಎಷ್ಟು ಜನರು ನೆರೆದಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ, ಅವರು ಯಾರು ಯಾರು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಆರೋಪಿತರು ಮತ್ತು ನಮ್ಮ ನಡುವೆ ಬೀರಲಿಂಗೇಶ್ವರ ದೇವರ ೪ ಎಕರೆ ಜಮೀನಿನ ಸಲುವಾಗಿ ಜಗಳ ಬಂದಿರುತ್ತದೆ ಎಂಧರೆ ಸರಿ. ನಮ್ಮ ಪಾಳಿ ಬಂದಾಗ ನಾವು ದೇವಸ್ಥಾನಕ್ಕೆ ಬಣ್ಣ ಪೂಜಾ ಅಲಂಕಾರ ಮಾಡಬೇಕು, ಜಾತ್ರೆ ಮಾಡಬೇಕು ಎನ್ನುವುದು ಇರುತ್ತದೆ, ಅದೇ ರೀತಿಯಾಗಿ ಆರೋಪಿತರದ್ದು ಬಂದಾಗ ಅವರು ಮಾಡಬೇಕು ಎನ್ನುವುದು ಇರುತ್ತದೆ. ನಾನು ನನ್ನ ಹೇಳಿಕೆಯಲ್ಲಿ ಪಾನಾ ಎಷ್ಟು ಉದ್ದ ಇತ್ತು, ಎಷ್ಟು ದಪ್ಪ ಇತ್ತು ಎಂದು ಹೇಳಿ ಬರೆಸಿರುವುದಿಲ್ಲ ಎಂಧರೆ ಸರಿ. ನಾನು ಇದೇ ಮೊದಲು ಬಾರಿಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಲ್ಲಿಯೂ ನುಡಿದಿರುವುದಿಲ್ಲ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಪೋಲಿಸ್ ಠಾಣೆಯಲ್ಲಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿ ನನಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ರಕ್ತಗಾಯವಾಗಿತ್ತು ರಕ್ತ ನನ್ನ ಬಟ್ಟೆಯ ಮೇಲೆ ಬಿದ್ದಿತ್ತು, ಸದರಿ ಬಟ್ಟೆಯನ್ನು ನಾನು ಪೋಲಿಸರಿಗೆ ನೀಡಿರುವುದಿಲ್ಲ. ಆಸ್ಪತ್ರೆಗೆ ನಾನು ೧.೦೦ ಗಂಟೆಗೆ ಹೋಗಿರುತ್ತೇನೆ.

ನಾನು ಆರೋಪಿ ನಂ.೧ಗೆ ಅಂಗೈಗೆ ಮುಂಗೈಗೆ ಹೊಡೆದು ರಕ್ತಗಾಯಪಡಿಸಿರುತ್ತೇನೆ ಎಂದು ಹೇಳಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ಇರುವ ಎಲ್ಲಾ ಸಾಕ್ಷಿದಾರರು ಒಂದೇ ಮನೆತನದವರು ಇರುತ್ತಾರೆ ಎಂಧರೆ ಸರಿ ಅಲ್ಲ. ಆರೋಪಿತರು ನಮ್ಮನ್ನು ಯಾವತ್ತು ಹೊಡೆ ಬಡೆ ಮಾಡಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿ ಅಲ್ಲ. ಆರೋಪಿತರ ಮೇಲೆ ಖೊಟ್ಟಿ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ದಿ.18.10.2013 ರಂದು ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬಯ್ಯುವುದು ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಬೀರ ದೇವರ ಗುಡಿಯ ಸಲುವಾಗಿ 4 ಎಕರೆ ಜಮೀನು ಇರುತ್ತದೆ, ಆರೋಪಿತರು ಮತ್ತು ನಮಗೆ ಅರ್ಧ ಅರ್ಧ ಜಮೀನು ಇರುತ್ತದೆ. ನಮಗೆ ಪಾಳಿ ಎರಡು ಸಲ ಬರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆದಕಾರಣದಿಂದ ಆರೋಪಿತರು ನಮ್ಮ ಜೊತೆ ಜಗಳ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೨ ರಿಂಗ್ ಪಾನಾದಿಂದ ನನ್ನ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆ, ನಂತರ ಆಸ್ಪತ್ರೆಗೆ ತೋರಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಅವರವರು ಜಗಳ ಮಾಡುತ್ತಿದ್ದರು, ನನಗೆ ಮೂರ್ಚೆ ಹೋಗಿರುತ್ತದೆ ಎಂದು

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೧ ಚಾಸಾ-೧ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಮುಖಕ್ಕೆ ಹೊಡೆದಿರುತ್ತಾನೆ, ಚಾಸಾ-೬ ರವರು ಜಗಳ ಬಿಡಿಸಲು ಹೋದಾಗ ಆರೋಪಿ ನಂ.೨ ಅವರನ್ನು ಎಳೆದಾಡಿ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೧ ಚಾಸಾ-೧ ರವರಿಗೆ ಕಟ್ಟಿಗೆಯಿಂದ ತಲೆಗೆ ಹೊಡೆದಿರುತ್ತಾನೆ, ಆರೋಪಿ ನಂ.೨ ರವರು ನನಗೆ ಪಾನಾದಿಂದ ಎಡಭುಜದ ಮೇಲೂ ಸಹ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೊಪಿ ನಂ.೩ ಇವರನ್ನು ಬಿಡಬೇಡಿರಿ ಖಲಾಸ ಮಾಡಿ ಎಂದು ಹೇಳಿರುತ್ತಾರೆ, ಆರೋಪಿ ನಂ.೨ ಚಾಸಾ-೪ ರವರಿಗೆ ರಿಂಗ್ ಪಾನಾದಿಂದ ತಲೆಗೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಜಗಳವನ್ನು ಚಾಸಾ-೭ ರಿಂದ ೧೦ ರವರು ನೋಡಿ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ